( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 19/01/2024**
**ಅಸಲು ದಾವೆ.ನಂ.34/2020**
**ಪಿ.ಡಬ್ಲ್ಯೂ1**

( ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಸ್ ಕೆ ವಕೀಲರಿಂದ ವಾದಿಯ ಪರವಾಗಿ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ. ನಾನು ಈ ಕೆಳಗೆ ಹೇಳಿದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಪ್ರಸ್ತುತ ದಾವೆಯಲ್ಲಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಸದರಿ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸಂಬಂದಿಸಿದ ವಂಶವೃಕ್ಷ ಪ್ರಮಾಣಪತ್ರವನ್ನು ನಿಪಿ1 ಎಂದು ,

ದಾವಾ ಸ್ವತ್ತುಗಳಿಗೆ ಸಂಬಂದಿಸಿದ 6 ಪಹಣಿ ಪತ್ರಗಳನ್ನು ನಿಪಿ2 ರಿಂದ ನಿಪಿ 7 ಎಂದು ,

ದಾವಾ ಸ್ವತ್ತುಗಳಿಗೆ ಸಂಬಂದಿಸಿದ ಮ್ಯುಟೇಷನ್ ರಿಜಿಸ್ಟರ್ ವಹಿಗಳನ್ನು ನಿಪಿ 8 ಮತ್ತು 9 ಎಂದು ,

ಸರ್ವೆ ನಂ 45/1 ರ 8 ಕೈ ಬರಹದ ಪಹಣಿ ಪತ್ರಗಳನ್ನು ನಿಪಿ10 ರಿಂದ 17 ಎಂದು,

ಸರ್ವೆ ನಂ 50 ಕ್ಕೆ ಸಂಬಂದಿಸಿದಂತೆ 7 ಕೈ ಬರಹದ ಪಹಣಿ ಪತ್ರಗಳನ್ನು ನಿಪಿ18 ರಿಂದ 24 ಎಂದು,

ಸರ್ವೆ ನಂ 45/2 ಕ್ಕೆ ಸಂಬಂದಿಸಿದ 5 ಕೈ ಬರಹದ ಪಹಣಿ ಪತ್ರಗಳನ್ನು ನಿಪಿ25 ರಿಂದ 29 ಎಂದು,

ಸರ್ವೆ ನಂ 53/1 ಕ್ಕೆ ಸಂಬಂದಿಸಿದ 2 ಕೈ ಬರಹದ ಪಹಣಿ ಪತ್ರಗಳನ್ನು ನಿಪಿ30 ರಿಂದ 31 ಎಂದು,

ಸರ್ವೆ ನಂ 53/2 ಕ್ಕೆ ಸಂಬಂದಿಸಿದ 4 ಕೈ ಬರಹದ ಪಹಣಿ ಪತ್ರಗಳನ್ನು ನಿಪಿ32 ರಿಂದ 35 ಎಂದು,

ದಾವಾ ಸ್ವತ್ತುಗಳಿಗೆ ಸಂಬಂದಿಸಿದ 6 ಪಹಣಿ ಪತ್ರಗಳನ್ನು ನಿಪಿ36 ರಿಂದ 41 ಎಂದು ,

ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ಆರ್ ಆರ್ ನಮೂನೆ 5 ಮತ್ತು 6 ಪ್ರತಿಗಳು ಲಭ್ಯವಿರುವುದಿಲ್ಲ ಎಂದು ಉಪ ತಹಶೀಲ್ದಾರ್ ರವರು ನೀಡಿದ ಹಿಂಬರಹವನ್ನು ನಿಪಿ 42 ಎಂದು ,

ದಾವಾ ಸ್ವತ್ತುಗಳಿಗೆ ಸಂಬಂದಿಸಿದ ಮ್ಯುಟೇಷನ್ ರಿಜಿಸ್ಟರ್ ವಹಿಯನ್ನು ನಿಪಿ 43 ಎಂದು (4 ಪುಟಗಳು) ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**
**ಓ.ಹೇ.ಕೇ.ಸ.ಇದೆ.**

**ಸಿವಿಲ್ ನ್ಯಾಯಾಧೀಶರು,**

**ಜೆ.ಎಂ.ಎಫ್.ಸಿ,ಅರಕಲಗೂಡು.**